ಅಸಲು ದಾವೆ ನಂಃ 190/2020 ಪಿ.ಡಬ್ಲ್ಯೂ:1–ಬಸಪ್ಪ ಚಲವಾದಿ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 25/07/2024 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ PKU ವಕೀಲರಿಂದಃ**

ಶಾರವ್ವ ಬಸಪ್ಪ ಚಲವಾದಿ ನನ್ನ ಹೆಂಡತಿ. ಸರ್ವೆ ನಂಬರ 253 ರಲ್ಲಿ ನಾನು ಎರಡು ಗುಂಟೆ, ಮೂರು ಗುಂಟೆ ಮತ್ತು ಐದು ಗುಂಟೆಯಂತೆ ಜಾಗ ಖರೀದಿ ಮಾಡಿದ್ದೇನೆ ಎಂದರೆ ನಿಜ. ಸದರಿ ಎರಡು ಗುಂಟೆ ಆಸ್ತಿ 1 ರಿಂದ 5 ನೇ ಪ್ರತಿವಾದಿಯರಿಗೆ ಸೇರಿದ ಆಸ್ತಿ ಎಂದರೆ ನಿಜ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಂತಹ ಸಂಗತಿಗಳನು ತಿಳಿದುಕೊಂಡಿದ್ದೇನೆ. ನನಗೆ ಇಂಗ್ಲೀಷ್ ಓದಲು ಬರುವುದಿಲ್ಲ. 03/01/2008 ರಲ್ಲಿ ನಾನು 1 ಮತ್ತು 3 ನೇ ಪ್ರತಿವಾದಿ ಹಾಗೂ ಊರಿನ ಮೂರು ಜನ ಹಾಗೂ ಬಿ ಬಿ ಗೊಳಸಂಗಿ ಇವರ ಸಮಕ್ಷಮ ಮಾತುಕತೆ ಮಾಡಿದೆವು. ಈ ವಿಚಾರವನ್ನು ನನ್ನ ಪ್ರಮಾಣ ಪತ್ರದಲ್ಲಿ ಕಾಣಿಸಿದ್ದೇನೆ. ಸಂಚಗಾರ ಪತ್ರವನ್ನು ನಾವು ಸೃಷ್ಟಿ ಮಾಡಿದ ಖೊಟ್ಟಿಪತ್ರ ಎಂದರೆ ಸರಿಯಲ್ಲ. ಸದರಿ ಸಂಚಗಾರ ಪತ್ರವನ್ನು ಸಿದ್ದವ್ವ ಮತ್ತು ಸಂಗಪ್ಪ ಬರೆದುಕೊಟ್ಟಿಲ್ಲ, ಅದರಲ್ಲಿ ಇರುವಂತಹ ಹೆಬ್ಬೆಟ್ಟಿನ ಸಹಿ ಸಿದ್ದವ್ವ ಮತ್ತು ಸಂಗಪ್ಪ ಇವರದ್ದು ಅಲ್ಲಾ ಎಂದರೆ ಸರಿಯಲ್ಲ. 2020 ರವರೆಗೆ ನಾನು ಸಿದ್ದವ್ವ ಮತ್ತು ಆತನ ಮಕ್ಕಳಿಗೆ ನೊಟೀಸ್ ಕೊಟ್ಟಿರಲಿಲ್ಲಾ ಎಂದರೆ ಸಾಕ್ಷಿ ನಾನು ಬಾಯಿ ಮಾತಿನ ಮೂಲಕ 6 ತಿಂಗಳಿಗೊಮ್ಮೆ ಕೇಳುತ್ತಾ ಇದ್ದೆ ಎಂದು ಹೇಳುತ್ತಾರೆ. 2008 ರಿಂದ 2020 ರಲ್ಲಿ ಯಾವ ಯಾವ ದಿನಾಂಕದಂದು ಬಾಯಿ ಮಾತಿನ ಮೂಲಕ ಕೇಳಿದ್ದೆ ಎಂದು ಈಗ ನೆನಪಿಲ್ಲ. 01/03/2008 ರಲ್ಲಿ ಪ್ರತಿವಾದಿಯರು ದುಡ್ಡು ಕೇಳಲು ಬಂದಿದ್ದರು, ನಾನು ಹಿರಿಯರಿಗೆ ಕೂಡಿಸಿ ಸಂಚಗಾರ ಪತ್ರವನ್ನು ಬರೆಯಿಸಿಕೊಂಡು ರೂ.15,000/– ಹಣವನ್ನು ಅವರಿಗೆ ಕೊಟ್ಟಿದ್ದೇನೆ. ದಿನಾಂಕ 03/01/2008 ರಲ್ಲಿ 2 ಗುಂಟೆ ನನಗೆ ಖರೀದಿಗೆ ಕೊಡು ಎಂದುನಾನು ಸಿದ್ದವ್ವನಿಗೆ ಕೇಳಿದ್ದೆ. ಆ ಸಮಯದಲ್ಲಿ ಯಾವುದೇ ಬರವಣಿಗೆಯಾಗಿರಲಿಲ್ಲ. ನಾನು ಅವರಿಗೆ ಯಾವುದೇ ಹಣವನ್ನು 01/03/2008 ಕ್ಕಿಂತ ಮುಂಚಿತವಾಗಿ ಕೊಟ್ಟಿರಲಿಲ್ಲ. ಇದಾದ 1–2 ವರ್ಷಗಳ ನಂತರ ಪ್ರತಿವಾದಿಗಳು ಹಣ ಕೇಳಲು ಬಂದಿದ್ದರು ಆ ಸಮಯದಲ್ಲಿ ನಾನು ಹಣ ಕೊಡಲಿಲ್ಲ, ಖರೀದಿ ಸಮಯದಲ್ಲಿ ಸಬ್ ರಜಿಸ್ಟರ್ ಸಮಕ್ಷಮ ಉಳಿದ ಹಣವನ್ನು ಕೊಡುತ್ತೇನೆ ಎಂದು ಹೇಳಿದೆ. 01/03/2008 ಕ್ಕೆ ರೂ.15,000/– ಕೊಟ್ಟಿದ್ದೆ, ಉಳಿದ ಹಣವನ್ನು ಖರೀದಿ ಸಮಯದಲ್ಲಿ ಕೊಡುತ್ತೇನೆ ಎಂದು ಹೇಳಿದ್ದೆ. 2015 ರಲ್ಲಿ 1 ನೇ ಪ್ರತಿವಾದಿ ಮನೆ ಕಟ್ಟಿಸುವ ಸಲುವಾಗಿ ಹಣ ಬೇಕಾಗಿದೆ ಎಂದು ನನಗೆ ಬಂದು ಕೇಳಿರಲಿಲ್ಲ. ನಾನು ವಕೀಲರ ಮೂಲಕ ಪ್ರತಿವಾದಿಯರಿಗೆ 2020 ರಲ್ಲಿ ಕಳುಹಿಸಿದ್ದೇನೆ. ವಕೀಲರ ಮೂಲಕ ನೊಟೀಸ್ ಕಳುಹಿಸಿದ ಬಗ್ಗೆ ಅಂಚೆ ರಸೀದಿ ಮತ್ತು ಅಂಚೆ ಸ್ವಿಕೃತಿಯನ್ನು ನ್ಯಾಯಾಲಯಕ್ಕೇ ಸಲ್ಲಿಸಿಲ್ಲ. ಪ್ರತಿವಾದಿಯರಿಗೂ ಯಾವತ್ತೂ ಹಣದ ಅಡಚಣೆಯಾಗಿರಲಿಲ್ಲ, ಅವರು ಸದರಿ ಎರಡು ಗುಂಟೆಯನ್ನು ಮಾರಾಟಕ್ಕೆ ಯಾವತ್ತೂ ಹಚ್ಚಿರಲಿಲ್ಲಾ ಎಂದರೆ ಸರಿಯಲ್ಲ. ಫೆಬ್ರುವರಿ 2020 ರಲ್ಲಿ ನಾನು ಸಿದ್ದವ್ವಳನ್ನು ಬೇಟಿಯಾಗಿ ಖರೀದಿ ಪತ್ರವನ್ನು ಬರೆದುಕೊಡಿ ಎಂದು ಕೇಳಿದ್ದೆ. ದಿನಾಂಕ ನನಗೆ ನೆನಪಿಲ್ಲ. ನಾನು ಆಧರಿಸುವಂತಹ ಸಂಚಗಾರ ಪತ್ರವನ್ನು ಪ್ರತಿವಾದಿಯರು ಬರೆದುಕೊಟ್ಟಿಲ್ಲ, ಆದ್ದರಿಂದ ಅದನ್ನು ಪುರಸ್ಕರಿಸುವ ಹೊಣೆಗಾರಿಕೆಯು ಪ್ರತಿವಾದಿಯರ

ಮೇಲೆ ಇಲ್ಲಾ ಎಂದರೆ ಸರಿಯಲ್ಲ. ಪ್ರತಿವಾದಿಯರು ಜಾಗದ ಕಬ್ಜಾವನ್ನು ನನಗೆ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2020 ರ ಜೂನ್ ತಿಂಗಳಲ್ಲಿ ಪ್ರತಿವಾದಿಯರ ಮೇಲೆ ದಬ್ಬಾಳಿಕೆ ಮಾಡಿ ಅವರಿಗೆ ಹೊಡಿ ಬಡಿ ಮಾಡಿದ್ದೆ, ಆ ಸಮಯದಲ್ಲಿ ಪ್ರತಿವಾದಿಯರು ನನ್ನ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದರು ಎಂದರೆ ಸರಿಯಲ್ಲ. 2008 ರಲ್ಲಿ ನಾನು ಆ ಪ್ಲಾಟ್ ನಲ್ಲಿ ಮನೆ ಕಟ್ಟಿಸಿಕೊಂಡೆ, 2020 ರಲ್ಲಿ ಆ ಜಾಗದ ಹತ್ತಿರ ಪ್ರತಿವಾದಿಗಳು ಬಂದು ಜಗಳ ಮಾಡಿದರು, ಆ ಸಮಯದಲ್ಲಿ ನಾನು ಕೇಸ್ ಮಾಡಿದೆ ಎಂದು ಹೇಳುತ್ತಾರೆ. ಸದರಿ ಎರಡು ಗುಂಟೆ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಇಲ್ಲಾ ಮತ್ತು ಮನೆ ಕಟ್ಟಿಕೊಳ್ಳಲು ಮತ್ತು ಕಬ್ಜಾದಲ್ಲಿ ಇರಲಿ ಯಾವುದೇ ಅಧಿಕಾರ ಇಲ್ಲಾ ಎಂದರೆ ಸರಿಯಲ್ಲ. 2 ಗುಂಟೆ ಆಸ್ತಿಯಲ್ಲಿ 2008 ರಿಂದ 1 ವರ್ಷದ ಅಂತರದಲ್ಲಿ ನಾನು ಮನೆ ಕಟ್ಟಿದ್ದು, ಆ ಸಮಯದಲ್ಲಿ ಬಾಂಡ ಪತ್ರವನ್ನು ಬರೆಯಿಸಿಕೊಂಡೆ. 01/03/2008 ರಲ್ಲಿ ಮೊದಲು ಬಾಂಡ್ ಪತ್ರವನ್ನು ಬರೆಯಿಸಿಕೊಂಡಿದ್ದೇನೆ. ನಂತರ ಸರಕಾರದಿಂದ ನನ್ನ ತಾಯಿಯ ಹೆಸರಿನಲ್ಲಿ ಒಂದು ಸ್ಕೀಮ್ ಬಂತು ಅದರಲ್ಲಿ 1 ಮನೆ ಕಟ್ಟಿಸಿಕೊಂಡೆ. ಆ ಸಮಯದಲ್ಲಿ ನಾನು ನನಗೆ ಪ್ರತಿವಾದಿಯರು ನನಗೆ ಹರಕತ್ತು ಮಾಡಿದ್ದರೇ ನಾನು ಸುಮ್ಮನೇ ಇರುತ್ತಿದ್ದೆ. ಸರಕಾರದವರು ಪ್ಲಾಟ್ ಯಾರ ಹೆಸರಿನಲ್ಲಿ ಇರುತ್ತೋ ಅವರ ಹೆಸರಿನಲ್ಲಿ ಹಣವನ್ನು ಮಂಜೂರು ಮಾಡುತ್ತಾರೆ ಎಂದರೆ ಸಾಕ್ಷಿ ಆಗ ಆ ತರ ಇರಲಿಲ್ಲಾ ಎಂದು ಹೇಳುತ್ತಾರೆ. ನಾನು ಎರಡು ಗುಂಟೆ ಜಾಗದಲ್ಲಿ ಪಂಚಾಯತಿಯಿಂದ ಪರವಾಣಿಗೆ ತೆಗೆದುಕೊಂಡು ಮನೆ ಕಟ್ಟಿಸಿದ ಬಗ್ಗೆ ಹಾಗೂ ಸರಕಾರದಿಂದ ಹಣ ಮಂಜೂರು ಆದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ . ಆ ರೀತಿ ಯಾವುದೇ ದಾಖಲೆ ಸಲ್ಲಿಸದೇ ಇದ್ದರೂ ಸಹ ಸಲ್ಲಿಸಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರ ಆಸ್ತಿಯನ್ನು ಎತ್ತಿಹಾಕಬೇಕೆಂಬ ಉದ್ದೇಶದಿಂದ ಈ ಒಂದು ಸುಳ್ಳು ಕೇಸ್ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.